**ಕರ್ನಾಟಕ ರಾಜ್ಯ ಪತ್ರ**

ಇಂಧನ ಸಚಿವಾಲಯ

ಅಧಿಸೂಚನೆ

ಸಂ. DE 15 PSR 99/110, ಬೆಂಗಳೂರು, ದಿನಾಂಕ 4ನೇ ಫೆಬ್ರವರಿ 2004

ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999 (1999ರ ಕರ್ನಾಟಕ ಅಧಿನಿಯಮ 25) ರ 57ನೇ ಪರಿಚ್ಛೇದದ ಅಗತ್ಯತೆಯಂತೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ವಾರ್ಷಿಕ ಲೆಕ್ಕ ಪತ್ರಗಳ) ನಿಯಮಗಳು, 2001ರ ಕರಡನ್ನು ಅಧಿಸೂಚನೆ ಸಂ DE 15 PSR 99, ದಿನಾಂಕ 20ನೇ ಮಾರ್ಚ್ 2003ರ, ಭಾಗ IV (a) ರ ಕರ್ನಾಟಕ ರಾಜ್ಯದ ಅಸಾಧಾರಣ ರಾಜ್ಯಪತ್ರ ದಿನಾಂಕ ಒಂದನೇ ಮೇ 2003ರ ಆವೃತ್ತಿಯಲ್ಲಿ ಪ್ರಕಟಿಸಿದ್ದು, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳ ಒಳಗೆ ಆ ಮೂಲಕ ಎಲ್ಲಾ ಬಾಧಿತ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಲಾಯಿತು.

ಅದೇ ರೀತಿ, ಸದರಿ ರಾಜ್ಯಪತ್ರವನ್ನು ಒಂದನೇ ಮೇ 2003 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಯಿತು.

ಅಲ್ಲದೇ, ಈ ಕರಡು ಪ್ರತಿಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಲ್ಲಿ ಯಾವುದೇ ಆಕ್ಷೇಪಣೆ ಮತ್ತು ಸಲಹೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಆದುದರಿಂದ ಈಗ, ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999 (1999ರ ಕರ್ನಾಟಕ ಅಧಿನಿಯಮ 25) ರ 57ನೇ ಪರಿಚ್ಛೇದದ ಉಪ-ನಿಯಮ (1) ರಲ್ಲಿ ತನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಗಿನಂತೆ ನಿಯಮಗಳನ್ನು ರಚಿಸಿದೆ, ಯಾವುವೆಂದರೆ: -

1) **ಶೀರ್ಷಿಕೆ ಮತ್ತು ಆರಂಭ** -
   1) ಈ ನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ವಾರ್ಷಿಕ ಲೆಕ್ಕ ಪತ್ರಗಳ) (ತಿದ್ದುಪಡಿ) ನಿಯಮಗಳು, 2003 ಎಂದು ಕರೆಯಲಾಗುತ್ತದೆ.
   2) ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುತ್ತವೆ.
2) **ನಿಯಮ 5ರ ಬದಲಾವಣೆ** -
   1) ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ವಾರ್ಷಿಕ ಲೆಕ್ಕ ಪತ್ರಗಳ) ನಿಯಮಗಳು 2001 ರಲ್ಲಿ (ಇನ್ನು ಮುಂದೆ ಸದರಿ ನಿಯಮ ಎಂದು ಉಲ್ಲೇಖಿಸಲ್ಪಡುತ್ತದೆ) ನಿಯಮ 5 ನ್ನು ಈ ಕೆಳಗಿನವುಗಳಿಂದ ಬದಲಾಯಿಸುವುದು, ಯಾವುವೆಂದರೆ -

      **"5. ವಾರ್ಷಿಕ ಲೆಕ್ಕ ಪತ್ರಗಳು** -

      1. ಆಯೋಗದ ವಾರ್ಷಿಕ ಲೆಕ್ಕ ಪತ್ರಗಳನ್ನು ಆರ್ಥಿಕ ವರ್ಷದ ಅಂತ್ಯದಿಂದ ಆರು ತಿಂಗಳ ಒಳಗೆ ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕು. ಸ್ವೀಕೃತಿ ಮತ್ತು ಪಾವತಿ ಖಾತೆಯನ್ನು ನಮೂನೆ 2ರಲ್ಲಿ ನಿರ್ವಹಿಸತಕ್ಕದ್ದು.

2. ಆಯೋಗದ ಆದಾಯ ಮತ್ತು ವೆಚ್ಚಗಳಿಗೆ ಪ್ರತ್ಯೇಕ ಲೆಕ್ಕಗಳನ್ನು ನಮೂನೆ 2ಎ ನಲ್ಲಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕು.
3. ಆಯೋಗದ ಬ್ಯಾಲೆನ್ಸ್ ಶೀಟ್ ಅನ್ನು ನಮೂನೆ 2ಬಿ ಯಲ್ಲಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕು.
4. ಆಯೋಗದ ಸ್ವತ್ತುಗಳ ವಿವರ ಪಟ್ಟಿಯನ್ನು ನಮೂನೆ 2ಸಿ ಯಲ್ಲಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕು.
5. ವಾರ್ಷಿಕ ಲೆಕ್ಕ ಪತ್ರಗಳ ಜೊತೆಗೆ ಲೆಕ್ಕಪರಿಶೋಧನೆಯ ವರದಿಯೂ ಇರಬೇಕು.

3) **ನಮೂನೆ 2 ರ ಬದಲಾವಣೆ** -

ಹೇಳಲಾದ ನಿಯಮದಲ್ಲಿ ಈ ಕೆಳಗೆ ತಿಳಿಸಲಾದ "ನಮೂನೆ 2" ರಿಂದ ಬದಲಾಯಿಸುವುದು, ಯಾವುದೆಂದರೆ :-

**"ನಮೂನೆ – 2"**

(ನಿಯಮ 5 ನೋಡುವುದು)

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ**

31ನೇ ಮಾರ್ಚ್ _____ ಗೆ ಕೊನೆಗೊಂಡ ವರ್ಷದ ಲೆಕ್ಕಪತ್ರಗಳ ದಾಖಲೆ

| ಕ್ರ. ಸಂ. | ಆರಂಭಿಕ ಶಿಲ್ಕು / ಸ್ವೀಕೃತಿ | | | | ಪಾವತಿಗಳು / ಸಂದಾಯ / ಮುಕ್ತಾಯ ಶಿಲ್ಕು | | | |
|---|---|---|---|---|---|---|---|---|
| | ದಿನಾಂಕ | ಲೆಕ್ಕ ಶೀರ್ಷಿಕೆ | ವಿವರಗಳು / ಆಯವ್ಯಯ ಶೀರ್ಷಿಕೆ | ಮೊತ್ತ ರೂ. | ದಿನಾಂಕ | ಲೆಕ್ಕ ಶೀರ್ಷಿಕೆ | ವಿವರಗಳು / ಆಯವ್ಯಯ ಶೀರ್ಷಿಕೆ | ಮೊತ್ತ ರೂ. |
| | | | | | | | | |
| | | | | | | | | |

**"ನಮೂನೆ – 2ಎ"**

(ನಿಯಮ 5 ನೋಡುವುದು)

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ**

_____ ವರ್ಷಕ್ಕೆ ಕೊನೆಗೊಂಡಂತೆ ಆದಾಯ ಮತ್ತು ವ್ಯಯದ ಲೆಕ್ಕ

| **ವೆಚ್ಚ** | **ಮೊತ್ತ (ರೂ. ಗಳಲ್ಲಿ)** | **ಆದಾಯ** | **ಮೊತ್ತ (ರೂ. ಗಳಲ್ಲಿ)** |
|---|---|---|---|
| | | | |
| | | | |

**"ನಮೂನೆ – 2ಬಿ"**

(ನಿಯಮ 5 ನೋಡುವುದು)

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ**

_____ ರಂತೆ ಬ್ಯಾಲೆನ್ಸ್ ಷೀಟ್

| **ಹೊಣೆಗಾರಿಕೆಗಳು** | **ಮೊತ್ತ (ರೂ. ಗಳಲ್ಲಿ)** | **ಆಸ್ತಿ** | **ಮೊತ್ತ (ರೂ. ಗಳಲ್ಲಿ)** |
|---|---|---|---|
| | | | |
| | | | |

**“ನಮೂನೆ – 2ಸಿ”**

(ನಿಯಮ 5 ನೋಡುವುದು)

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ**

_____ ರಂತೆ ಸ್ವತ್ತು (ಆಸ್ತಿ) ಗಳ ವಿವರಪಟ್ಟಿ

| **ಕ್ರ.ಸಂ** | **ಸ್ವತ್ತು (ಆಸ್ತಿ)** | **____ ರಂತೆ ಆರಂಭ ಶಿಲ್ಕು** | **ವರ್ಷದ ಅವಧಿಯಲ್ಲಿ ಸೇರ್ಪಡೆ** | **ಒಟ್ಟು** | **ವರ್ಷದ ಅವಧಿಯಲ್ಲಿ ವಿಲೇವಾರಿ** | **ಸವಕಳಿ** | **____ ರಂತೆ ಮುಕ್ತಾಯ ಶಿಲ್ಕು** |
|---|---|---|---|---|---|---|---|
| | | **(ರೂ.)** | **(ರೂ.)** | **(ರೂ.)** | **(ರೂ.)** | **(ರೂ.)** | **(ರೂ.)** |
| | | | | | | | |
| | | | | | | | |

**ಸಹಿ**

----------

ಕರ್ನಾಟಕದ ರಾಜ್ಯಪಾಲರ ಪರವಾಗಿ ಹಾಗೂ ಆದೇಶದ ಮೇರೆಗೆ,

**ಕೆ.ಎಲ್.ಜಯರಾಮ್**

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ.